# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್ ಸಿ ರವರ ನ್ಯಾಯಾಲಯ, ಮಳವಳ್ಳಿ

## ಸಿಸಿ ನಂಃ **49/2022**

ಪಿರ್ಯಾದಿ ಃ ರಾಜ್ಯ ಸರ್ಕಾರ,
ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆ ಮುಖೇನ.

- ವಿರುದ್ಧ -

ಆರೋಪಿ ಃ **01** ಶಿವಕುಮಾರ್.ಕೆ.ಇ
ಬಿನ್ ಈರಂಕಯ್ಯ **@** ಕರಿಗುಂಡ
ವಯಸ್ಸು ಃ 23 ವರ್ಷ,
ವಾಸಃ ಕಲ್ಲುವೀರನಹಳ್ಳಿ ಗ್ರಾಮ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಕಲಂ **313** ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಆರೋಪಿಯ ಹೇಳಿಕೆ.

1**)** ಅಭಿಯೋಜನೆ ಪರ ಹೇಳಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿದ್ದೀರಾ**?**

ಉತ್ತರಃ

2**)** ಪ್ರಾ.ಸಾ8 ಶ್ರೀ ರವಿಕುಮಾರ್.ಡಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ದಿನಾಂಕ 17.10.2021 ರಂದು ಠಾಣಾ ಪ್ರಭಾರೆಯಲ್ಲಿದ್ದಾಗ ಬೆಳಿಗ್ಗೆ 10.00 ರ ಸಮಯದಲ್ಲಿ ಚಾಸಾ1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೇ ಸಂಖ್ಯೆ 184/2021 ರಂತೆ ಪ್ರಕರಣ ದಾಖಲು ಮಾಡಿ ಪ್ರ.ವ.ವರದಿಯನ್ನು ತಯಾರು ಮಾಡಿರುವುದಾಗಿ, ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ2 ರವರು ತೋರಿಸಿದ ಸ್ಥಳದಲ್ಲಿ ಚಾಸಾ4 ಮತ್ತು 5 ರವರ ಸಮಕ್ಷಮ ಸಂಜೆ 4.15 ರಿಂದ 5.00 ರ ಸಮಯದಲ್ಲಿ ಪಂಚನಾಮೆ ಜರುಗಿಸಿ ಸದರಿ ಕಾಲಕ್ಕೆ ಕಚ್ಚಾ ನಕಾಶೆಯನ್ನು ಬರೆದಿರುವುದಾಗಿ, ಮುಂದಿನ ತನಿಖೆಯನ್ನು ಚಾಸಾ25 ರವರಿಗೆ ವಹಿಸಿರುತ್ತೇನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ**?**

ಉತ್ತರಃ

3**)** ಪ್ರಾ.ಸಾ11 ಶ್ರೀ ರಾಜೇಶ್.ಎ.ಕೆ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ದಿ**:**17.10.2021 ರಂದು ಈ ಪ್ರಕರಣದ ಕಡತವನ್ನು ಚಾಸಾ24 ರವರಿಂದ ಪಡೆದು ಪರಿಶೀಲಿಸಿರುವುದಾಗಿ, ದಿ**:**17.10.2021 ರಂದು ಮೃತನಿಗೆ ಸಂಬಂಧಿಸಿಂತೆ

ಎಂ.ಎಲ್.ಸಿ. ಉತಾರಗಳನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿರುವುದಾಗಿ, ದಿ:23.10.2021 ರಂದು ಮೃತ ವ್ಯಕ್ತಿಯ ಪಿ.ಎಂ. ವರದಿಯನ್ನು ನಮ್ಮ ಸಿಬ್ಬಂದಿಯು ಕೆ.ಆರ್.ಆಸ್ಪತ್ರೆಯಿಂದ ತಂದು ಹಾಜರುಪಡಿಸಿದ್ದನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿರುವುದಾಗಿ, ಅಪಘಾತ ಪಡಿಸಿದ ವಾಹನದ ಚಾಲಕ ಮತ್ತು ಮಾಲೀಕರ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಕ ಮಾಡಿರುವುದಾಗಿ, ದಿ:25.10.2021 ರಂದು ಚಾಸಾ18 ರವರು ಅಪಘಾತ ಪಡಿಸಿದ ಕೆಎ-05-ಜಡ್ -0751 ನಂಬರ್‌ನ ಮಾರುತಿ ಜೆನ್ ಕಾರನ್ನು ಮತ್ತು ಅದರ ಚಾಲಕನನ್ನು ನಮ್ಮ ಕಛೇರಿಗೆ ಹಾಜರುಪಡಿಸಿದ್ದು, ವಾಹನವನ್ನು ಠಾಣಾ ಮುಂಭಾಗದಲ್ಲಿ ಚಾಸಾ10 ಮತ್ತು 11 ರವರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಬೆಳಿಗ್ಗೆ 10 ರಿಂದ 10-45 ರ ಸಮಯದಲ್ಲಿ ಜರುಗಿಸಿ, ಅಮಾನತ್ತು ಪಡಿಸಿಕೊಂಡಿರುವುದಾಗಿ, ನಮ್ಮ ಸಿಬ್ಬಂದಿಯ ಮೂಲಕ ಸದರಿ ಕಾಲಕ್ಕೆ ಫೋಟೋಗಳನ್ನು ತೆಗೆಸಿರುವುದಾಗಿ, ಅಮಾನತ್ತು ಪಡಿಸಿಕೊಂಡ ವಾಹನಕ್ಕೆ ಸಂಬಂಧವಾಗಿ ಮಾಲುಪಟ್ಟಿಯನ್ನು ತಯಾರು ಮಾಡಿರುವುದಾಗಿ, ಅದೇ ದಿನ ಆರೋಪಿಗೆ ನೋಟೀಸ್ ಜಾರಿ ಮಾಡಿ ಆತನನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ**?**

ಉತ್ತರಃ

4) ಸಾಕ್ಷಿ ಮುಂದುವರೆದು ನುಡಿದಿರುವುದೇನೆಂದರೆ, ಅದೇ ದಿನ ಕಾರಿನ ಮಾಲೀಕರಾದ ಆರೋಪಿಗೆ ಕಲಂ 133 ರಂತೆ ನೋಟೀಸ್ ಜಾರಿ ಮಾಡಿ ಉತ್ತರ ಪಡೆದಿರುವುದಾಗಿ, ವಾಹನ ತಪಾಸಣೆಗಾಗಿ ಆರ್.ಟಿ.ಓ. ರವರಿಗೆ ಅದೇ ದಿನ ಮನವಿ ಸಲ್ಲಿಸಿರುವುದಾಗಿ, ಅದೇ ದಿನ ಐ.ಎಂ.ವಿ ವರದಿಯನ್ನು ಸ್ವೀಕರಿಸಿರುವುದಾಗಿ, ಅದೇ ದಿನ ವಾಹನದ ಮಾಲೀಕರಿಂದ ಇಂಡಿಮ್ನಿಟಿ ಪಡೆದು ಕಾರನ್ನು ಬಿಡುಗಡೆ ಮಾಡಿರುವುದಾಗಿ, ಸದರಿ ಕಾಲಕ್ಕೆ ಫೋಟೋವನ್ನು ತೆಗೆಸಿರುವುದಾಗಿ, ದಿ:21.01.2022 ರಂದು ಚಾಸಾ19 ರವರು ಕೆಎ-11-ಇಹೆಚ್-9025 ನಂಬರ್‌ನ ವಾಹನವನ್ನು ಪತ್ತೆ ಮಾಡಿ, ನಮ್ಮ ಕಛೇರಿಗೆ ಹಾಜರುಪಡಿಸಿರುತ್ತಾರೆಂದು, ಸದರಿ ವಾಹನವನ್ನು ನಮ್ಮ ಠಾಣಾ ಆವರಣದಲ್ಲಿ ಚಾಸಾ12 ಮತ್ತು 13 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10-45 ರ ಸಮಯದಲ್ಲಿ ಅಮಾನತ್ತು ಪಂಚನಾಮೆಯನ್ನು ಜರುಗಿಸಿ, ಸದರಿ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಾಗಿ, ಸದರಿ ಕಾಲಕ್ಕೆ ಫೋಟೋವನ್ನು ತೆಗೆಸಿರುವುದಾಗಿ, ಅಮಾನತ್ತು ಪಡಿಸಿಕೊಂಡ ಬೈಕ್‌ಗೆ ಸಂಬಂಧವಾಗಿ ಮಾಲುಪಟ್ಟಿಯನ್ನು ತಯಾರು ಮಾಡಿರುವುದಾಗಿ, ಅದೇ ದಿನ ಸದರಿ ವಾಹನದ ಮಾಲೀಕರಾದ ಅರುಣ್ ಕುಮಾರ್ ರವರಿಗೆ ಕಲಂ 133 ರಂತೆ ನೋಟೀಸ್ ಜಾರಿ ಮಾಡಿ, ಉತ್ತರ ಪಡೆದಿರುವುದಾಗಿ, ಅಪಘಾತ ಪಡಿಸಿದ 1 ನೇ ಆರೋಪಿಗೆ ಅದೇ ದಿನ ನೋಟೀಸ್ ಜಾರಿ ಮಾಡಿ ಆತನನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ, ಅದೇ ದಿನ ದ್ವಿಚಕ್ರ ವಾಹನದ ತಪಾಸಣೆಗಾಗಿ ಆರ್.ಟಿ.ಓ. ರವರಿಗೆ ಮನವಿಯನ್ನು ಸಲ್ಲಿಸಿರುವುದಾಗಿ, ಅದೇ ದಿನ ಆರ್.ಟಿ.ಓ. ರವರು ನೀಡಿದ ಐ.ಎಂ.ವಿ ವರದಿಯನ್ನು ಸ್ವೀಕರಿಸಿರುವುದಾಗಿ, ಅದೇ ದಿನ

ಚಾಸಾ2 ಮತ್ತು 3 ರವರನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿರುವುದಾಗಿ, ದಿ:20.04.2022 ರಂದು ಚಾಸಾ3 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುವುದಾಗಿ, ದಿ:21.04.2022 ರಂದು ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

5) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಮಾಡಿಸುವಿರಾ?

ಉತ್ತರಃ

6) ನೀವು ನ್ಯಾಯಾಲಯಕ್ಕೆ ಹೆಚ್ಚುವರಿಯಾಗಿ ಏನಾದರೂ ಹೇಳುವುದು ಇದೆಯೇ?

ಉತ್ತರಃ

(ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಆರೋಪಿ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ.)

ದಿನಾಂಕ 31.07.2026

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.